# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 301 |
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14.09.2022 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸದಾಗಿ ನಿರ್ಮಿಸಲಾದ ತಾಲ್ಲೂಕು ಕೇಂದ್ರಗಳ ಸಂಖ್ಯೆ ಎಷ್ಟು; ಯಾವ ದಿನಾಂಕದಿಂದ ಈ ತಾಲ್ಲೂಕುಗಳು ಅಸ್ತಿತ್ವಕ್ಕೆ ಬಂದಿವೆ; ಕಳೆದ ಮೂರು ವರ್ಷಗಳಲ್ಲಿ ಈ ತಾಲ್ಲೂಕುಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾದ ಅನುದಾನ ಹಾಗೂ ಖರ್ಚು ಮಾಡಲಾದ ಅನುದಾನ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ 2017-18ನೇ ಸಾಲಿನಿಂದ ಒಟ್ಟು 64 ಹೊಸ ತಾಲ್ಲೂಕುಗಳನ್ನು ಘೋಷಿಸಲಾಗಿದ್ದು, 62 ತಾಲ್ಲೂಕುಗಳು ಅಸ್ತಿತ್ವಕ್ಕೆ ಬಂದಿರುತ್ತವೆ. ಹೊಸ ತಾಲ್ಲೂಕುಗಳಿಗೆ ಗ್ರಾಮಗಳನ್ನು ಸೇರ್ಪಡೆ ಮಾಡಿ ಅಂತಿಮ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅಸ್ತಿತ್ವಕ್ಕೆ ಬಂದಿದ್ದು, ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.<br>ಹೊಸ ತಾಲ್ಲೂಕುಗಳು ಅಸ್ತಿತ್ವಕ್ಕೆ ಬಂದ ನಂತರ ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಅನುವಾಗುವಂತೆ ಕಂದಾಯ ಇಲಾಖೆಯಿಂದ ಮಂಜೂರು ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಆ) | ಹೊಸದಾಗಿ ಘೋಷಿಸಲಾದ ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; ಸದರಿ ಮೂಲ ಸೌಲಭ್ಯಗಳ ಒದಗಿಸುವಿಕೆಗೆ ಕಾಲಮಿತಿಯನ್ನು ನಿಗಧಿಪಡಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಪೀಠೋಪಕರಣ, ಒಳಾಂಗಣ ವಿನ್ಯಾಸ, ವಿದ್ಯುಚ್ಛಕ್ತಿ ಸೌಲಭ್ಯ, ಶೌಚಾಲಯ, ಲಿಫ್ಟ್ ಅಳವಡಿಕೆ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಂತೆ ರೂ.10.00 ಕೋಟಿಗಳ ಅಂದಾಜು ಮಿತಿಯಲ್ಲಿ 'ತಾಲ್ಲೂಕು ಆಡಳಿತ ಸೌಧ' ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ.<br>ಅದರಂತೆ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ಥಳ ಗುರುತಿಸಿ ಕಟ್ಟಡ ನಿರ್ಮಾಣ ಮಾಡಲು ಸವಿವರ ಅಂದಾಜು ಪಟ್ಟಿ ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮ ವಹಿಸಲಾಗುವುದು. |
| ಇ) | ಸದರಿ ತಾಲ್ಲೂಕುಗಳಲ್ಲಿ ಎಲ್ಲಾ ಸರ್ಕಾರಿ ಕಛೇರಿಗಳನ್ನು ಪ್ರಾರಂಭಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಯಾವ ಯಾವ ಕಛೇರಿಗಳು ಪ್ರಾರಂಭವಾಗಿವೆ ಮತ್ತು ಇದುವರೆಗೂ ತಾಲ್ಲೂಕು ಕಛೇರಿಗಳು ಪ್ರಾರಂಭವಾಗದೇ ಇರುವ ಇಲಾಖೆಗಳು ಯಾವುವು; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ಹೊಸದಾಗಿ ರಚನೆಯಾಗಿರುವ 62 ತಾಲ್ಲೂಕುಗಳಲ್ಲಿ 59 ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯಿಂದ ಅಗತ್ಯ ಸಂಖ್ಯೆಯ ಹುದ್ದೆಗಳನ್ನು ಸೃಜಿಸಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲಾಗಿದೆ. ಇನ್ನುಳಿದ 3 ತಾಲ್ಲೂಕುಗಳಲ್ಲಿ ತಹಸೀಲ್ದಾರ್ ಕಚೇರಿಗೆ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಹುದ್ದೆಗಳ ಮಂಜೂರಾತಿಯ ಆದೇಶದ ಪ್ರತಿಗಳನ್ನು **ಅನುಬಂಧ-3** ರಲ್ಲಿ ನೀಡಿದೆ.<br>ಹೊಸ ತಾಲ್ಲೂಕುಗಳಲ್ಲಿ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಆರ್ಥಿಕ ಇಲಾಖೆಯ |
| ಈ) | ಸದರಿ ತಾಲ್ಲೂಕುಗಳಲ್ಲಿ ಎಲ್ಲಾ ಇಲಾಖೆಗಳ ಸರ್ಕಾರಿ ಕಛೇರಿಗಳನ್ನು ಪ್ರಾರಂಭಿಸಲು ಅಗತ್ಯ ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳನ್ನು ಮಂಜೂರು ಮಾಡಲಾಗಿದೆಯೇ; | ಸಹಮತಿಯೊಂದಿಗೆ ಹಂತ-ಹಂತವಾಗಿ ಪ್ರಾರಂಭಿಸಲು ಎಲ್ಲಾ ಇಲಾಖೆಗಳ ಅಪರ ಮುಖ್ಯ / ಪ್ರಧಾನ ಕಾರ್ಯದರ್ಶಿಗಳಿಗೆ ಹಾಗೂ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಮೂಲಕ ಸೂಕ್ತ ನಿರ್ದೇಶನ |

| | | |
|---|---|---|
| | ಹಾಗಿದ್ದಲ್ಲಿ, ಯಾವ ಯಾವ ಇಲಾಖೆ / ಕಛೇರಿಗಳಿಗೆ ಎಷ್ಟು ಅಧಿಕಾರಿ / ಸಿಬ್ಬಂದಿ ಹುದ್ದೆಗಳು ಮಂಜೂರು ಮಾಡಲಾಗಿದೆ? (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ನೀಡಲಾಗಿದೆ. ಪತ್ರದ ಪ್ರತಿಯನ್ನು **ಅನುಬಂಧ-4** ರಲ್ಲಿ ನೀಡಿದೆ.<br>ಮುಂದುವರಿದು, ಹೊಸ ತಾಲ್ಲೂಕುಗಳಲ್ಲಿ ಪ್ರಾರಂಭಿಸಿರುವ ವಿವಿಧ ಇಲಾಖೆಗಳ ಕಚೇರಿಗಳ ವಿವರಗಳನ್ನು **CD** ಯಲ್ಲಿ ಅನುಬಂಧಿಸಿ ನೀಡಲಾಗಿದೆ. |

**ಸಂಖ್ಯೆ: ಕಂಇ 55 ಎಲ್ಆರ್‌ಡಿ 2022**

**(ಆರ್. ಅಶೋಕ)**
ಕಂದಾಯ ಸಚಿವರು

ಅನುಬಂಧ - 1 LCQ - 301

## ರಾಜ್ಯದಲ್ಲಿ ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳ ವಿವರ
## (ದಿನಾಂಕ:1-1-2018 ರಿಂದ ಇದುವರೆಗೆ)

| ಕ್ರ. ಸಂ | ಜಿಲ್ಲೆಯ ಹೆಸರು | ಅವಿಭಜಿತ ತಾಲ್ಲೂಕಿನ ಹೆಸರು | ನೂತನವಾಗಿ ರಚಿಸಿರುವ ತಾಲ್ಲೂಕಿನ ಹೆಸರು | ಅಧಿಸೂಚನೆ ದಿನಾಂಕ | ರಾಜ್ಯ ಪತ್ರದಲ್ಲಿ ಪ್ರಕಟಗೊಂಡು ಅಸ್ತಿತ್ವಕ್ಕೆ ಬಂದಿರುವ ದಿನಾಂಕ |
|---|---|---|---|---|---|
| **ಬೆಂಗಳೂರು ವಿಭಾಗ** | | | | | |
| 1. | ಬೆಂಗಳೂರು ನಗರ | ಬೆಂಗಳೂರು ಉತ್ತರ | ಯಲಹಂಕ | 27.01.2018 | 27.01.2018 |
| 2. | ಕೋಲಾರ | ಬಂಗಾರಪೇಟೆ | ಕೆ.ಜಿ.ಎಫ್ | 29.01.2018 | 29.01.2018 |
| 3. | ದಾವಣಗೆರೆ | ಹೊನ್ನಾಳಿ | ನ್ಯಾಮತಿ | 11.01.2018 | 11.01.2018 |
| 4. | ರಾಮನಗರ | ಕನಕಪುರ | **ಹಾರೋಹಳ್ಳಿ** | | |
| 5. | ಚಿಕ್ಕಬಳ್ಳಾಪುರ | ಬಾಗೇಪಲ್ಲಿ ಮತ್ತು ಚಿಂತಾಮಣಿ | **ಚೇಳೂರು** | 23.03.2022 | 23.03.2022 |
| 6. | ಚಿಕ್ಕಬಳ್ಳಾಪುರ | ಗೌರಿಬಿದನೂರು | **ಮಂಚೇನಹಳ್ಳಿ** | | |
| **ಮೈಸೂರು ವಿಭಾಗ** | | | | | |
| 7. | ಮೈಸೂರು | ಹೆಗ್ಗಡದೇವನ ಕೋಟೆ | ಸರಗೂರು | 22.01.2018 | 22.01.2018 |
| 8. | ಮೈಸೂರು | ಕೃಷ್ಣರಾಜನಗರ | **ಸಾಲಿಗ್ರಾಮ** | 31.12.2020 | 31.12.2020 |
| 9. | ಚಿಕ್ಕಮಗಳೂರು | ತರೀಕೆರೆ, ಕಡೂರು | ಅಜ್ಜಂಪುರ | 11.01.2018 | 11.01.2018 |
| 10. | ಚಿಕ್ಕಮಗಳೂರು | ಮೂಡಿಗೆರೆ | **ಕಳಸಾ** | 22.06.2021 | 24.06.2021 |
| 11. | ಚಾಮರಾಜನಗರ | ಕೊಳ್ಳೇಗಾಲ | ಹನೂರು | 18.01.2018 | 18.01.2018 |
| 12. | ದಕ್ಷಿಣ ಕನ್ನಡ | ಮಂಗಳೂರು | ಮೂಡಬಿದಿರೆ | 11.01.2018 | 11.01.2018 |
| 13. | ದಕ್ಷಿಣ ಕನ್ನಡ | ಪುತ್ತೂರು, ಸುಳ್ಯ | ಕಡಬ | 12.01.2018 | 12.01.2018 |
| 14. | ದಕ್ಷಿಣ ಕನ್ನಡ | ಮಂಗಳೂರು ಮತ್ತು ಬಂಟ್ವಾಳ | **ಉಳ್ಳಾಲ** | 03.09.2020 | 17.09.2020 |
| 15. | ದಕ್ಷಿಣ ಕನ್ನಡ | ಮಂಗಳೂರು | **ಮುಲ್ಕಿ** | 19.02.2021 | 25.02.2021 |
| 16. | ಉಡುಪಿ | ಕಾರ್ಕಳ, ಕುಂದಾಪುರ | ಹೆಬ್ರಿ | 29.01.2018 | 29.01.2018 |
| 17. | ಉಡುಪಿ | ಕುಂದಾಪುರ | ಬೈಂದೂರು | 27.01.2018 | 27.01.2018 |
| 18. | ಉಡುಪಿ | ಉಡುಪಿ | ಬ್ರಹ್ಮಾವರ | 18.01.2018 | 18.01.2018 |
| 19. | ಉಡುಪಿ | ಉಡುಪಿ | ಕಾಪು | 18.01.2018 | 18.01.2018 |
| 20. | ಕೊಡಗು | ವಿರಾಜಪೇಟೆ | **ಪೊನ್ನಂಪೇಟೆ** | 03.07.2020 | 20.07.2020 |
| 21. | ಕೊಡಗು | ಸೋಮವಾರಪೇಟೆ | **ಕುಶಾಲನಗರ** | 31.12.2020 | 31.12.2020 |
| **ಬೆಳಗಾವಿ ವಿಭಾಗ** | | | | | |
| 22. | ಬೆಳಗಾವಿ | ಅಥಣಿ | ಕಾಗವಾಡ | 22.01.2018 | 22.01.2018 |
| 23. | ಬೆಳಗಾವಿ | ಗೋಕಾಕ್ | ಮೂಡಲಗಿ | 22.01.2018 | 22.01.2018 |
| 24. | ಬೆಳಗಾವಿ | ಚಿಕ್ಕೋಡಿ | ನಿಪ್ಪಾಣಿ | 08.02.2018 | 08.02.2018 |
| 25. | ಬೆಳಗಾವಿ | ಸವದತ್ತಿ | **ಯರಗಟ್ಟಿ** | | |
| 26. | ಗದಗ | ಶಿರಹಟ್ಟಿ | ಲಕ್ಷ್ಮೇಶ್ವರ | 18.01.2018 | 18.01.2018 |
| 27. | ಗದಗ | ರೋಣ | ಗಜೇಂದ್ರಗಡ | 12.01.2018 | 12.01.2018 |
| 28. | ಧಾರವಾಡ | ಧಾರವಾಡ | ಅಳ್ನಾವರ | 29.01.2018 | 29.01.2018 |
| 29. | ಧಾರವಾಡ | ನವಲಗುಂದ | ಅಣ್ಣಿಗೇರಿ | 27.01.2018 | 27.01.2018 |
| 30. | ಧಾರವಾಡ | ಹುಬ್ಬಳ್ಳಿ | ಹುಬ್ಬಳ್ಳಿ ನಗರ | 27.01.2018 | 27.01.2018 |
| 31. | ಹಾವೇರಿ | ಹಿರೇಕೆರೂರು | ರಟ್ಟೆಹಳ್ಳಿ | 11.01.2018 | 11.01.2018 |
| 32. | ಉತ್ತರ ಕನ್ನಡ | ಹಳಿಯಾಳ, ಜೋಯಿಡಾ (ಸೂಪ) | ದಾಂಡೇಲಿ | 27.01.2018 | 27.01.2018 |

| | | | | | |
|---|---|---|---|---|---|
| 33. | ಬಾಗಲಕೋಟೆ | ಹುನಗುಂದ | ಇಳಕಲ್ | 18.01.2018 | 18.01.2018 |
| 34. | ಬಾಗಲಕೋಟೆ | ಜಮಖಂಡಿ, ಮುಧೋಳ | ರಬಕವಿ-ಬನಹಟ್ಟಿ | 18.01.2018 | 18.01.2018 |
| 35. | ಬಾಗಲಕೋಟೆ | ಬಾದಾಮಿ | ಗುಳೇದಗುಡ್ಡ | 27.01.2018 | 27.01.2018 |
| 36. | ವಿಜಯಪುರ | ಸಿಂದಗಿ, ಬಸವನಬಾಗೇವಾಡಿ | ದೇವರ ಹಿಪ್ಪರಗಿ | 19.01.2018 | 20.01.2018 |
| 37. | ವಿಜಯಪುರ | ಮುದ್ದೆಬಿಹಾಳ, ಬಸವನಬಾಗೇವಾಡಿ, ಸಿಂದಗಿ | ತಾಳಿಕೋಟೆ | 19.01.2018 | 20.01.2018 |
| 38. | ವಿಜಯಪುರ | ಬಸವನ ಬಾಗೇವಾಡಿ, ಮುದ್ದೇಬಿಹಾಳ | ನಿಡಗುಂದಿ | 22.01.2018 | 22.01.2018 |
| 39. | ವಿಜಯಪುರ | ವಿಜಯಪುರ | ತಿಕೋಟ | 18.01.2018 | 18.01.2018 |
| 40. | ವಿಜಯಪುರ | ಇಂಡಿ | ಚಡಚಣ | 18.01.2018 | 18.01.2018 |
| 41. | ವಿಜಯಪುರ | ವಿಜಯಪುರ | ಬಬಲೇಶ್ವರ | 18.01.2018 | 18.01.2018 |
| 42. | ವಿಜಯಪುರ | ಬಸವನ ಬಾಗೇವಾಡಿ | ಕೊಲ್ಹಾರ | 22.01.2018 | 22.01.2018 |
| 43. | ವಿಜಯಪುರ | ಸಿಂದಗಿ | **ಆಲಮೇಲ** | 08.10.2020 | 12.10.2020 |
| **ಕಲಬುರಗಿ ವಿಭಾಗ** | | | | | |
| 44. | ಕಲಬುರಗಿ | ಜೇವರ್ಗಿ | ಯಡ್ರಾಮಿ | 18.01.2018 | 18.01.2018 |
| 45. | ಕಲಬುರಗಿ | ಕಲಬುರಗಿ, ಆಳಂದ, ಚಿಂಚೋಳಿ | ಕಮಲಾಪುರ | 19.01.2018 | 20.01.2018 |
| 46. | ಕಲಬುರಗಿ | ಚಿತ್ತಾಪುರ | ಶಹಾಬಾದ್ | 30.01.2018 | 30.01.2018 |
| 47. | ಕಲಬುರಗಿ | ಚಿತ್ತಾಪುರ, ಚಿಂಚೋಳಿ | ಕಾಳಗಿ | 30.01.2018 | 30.01.2018 |
| 48. | ಬೀದರ್ | ಔರಾದ್ (ಬಿ) | ಕಮಲಾನಗರ | 19.01.2018 | 20.01.2018 |
| 49. | ಬೀದರ್ | ಬಸವ ಕಲ್ಯಾಣ | ಹುಲಸೂರು | 30.01.2018 | 30.01.2018 |
| 50. | ಬೀದರ್ | ಹುಮ್ನಾಬಾದ್ | ಚಿಟಗುಪ್ಪ | 19.01.2018 | 20.01.2018 |
| 51. | ರಾಯಚೂರು | ಸಿಂದನೂರು, ಲಿಂಗಸುಗೂರು, ಮಾನ್ವಿ | ಮಸ್ಕಿ | 11.01.2018 | 11.01.2018 |
| 52. | ರಾಯಚೂರು | ಮಾನ್ವಿ | ಸಿರವಾರ | 11.01.2018 | 11.01.2018 |
| 53. | ರಾಯಚೂರು | ದೇವದುರ್ಗ | **ಅರಕೇರಾ** | 02.11.2021 | 15.11.2021 |
| 54. | ಕೊಪ್ಪಳ | ಗಂಗಾವತಿ | ಕಾರಟಗಿ | 19.01.2018 | 20.01.2018 |
| 55. | ಕೊಪ್ಪಳ | ಗಂಗಾವತಿ | ಕನಕಗಿರಿ | 19.01.2018 | 20.01.2018 |
| 56. | ಕೊಪ್ಪಳ | ಯಲಬುರ್ಗಾ | ಕುಕನೂರು | 18.01.2018 | 18.01.2018 |
| 57. | ಯಾದಗಿರಿ | ಶೋರಾಪುರ | ಹುಣಸಗಿ | 27.01.2018 | 27.01.2018 |
| 58. | ಯಾದಗಿರಿ | ಶಹಪುರ | ವಡಗೇರಾ | 27.01.2018 | 27.01.2018 |
| 59. | ಯಾದಗಿರಿ | ಯಾದಗಿರಿ | ಗುರುಮಿಟ್ಕಲ್ | 27.01.2018 | 27.01.2018 |
| 60. | ಬಳ್ಳಾರಿ | ಕೂಡ್ಲಿಗಿ | ಕೊಟ್ಟೂರು | 11.01.2018 | 11.01.2018 |
| 61. | ಬಳ್ಳಾರಿ | ಬಳ್ಳಾರಿ | ಕುರುಗೋಡು | 11.01.2018 | 11.01.2018 |
| 62. | ಬಳ್ಳಾರಿ | ಕುರುಗೋಡು | ಕಂಪ್ಲಿ | 22.01.2018 | 22.01.2018 |

ಅನುಬಂಧ-2 LCQ-301

**2017-18 ನೇ ಸಾಲಿನಿಂದ ಇದುವರೆಗೆ ನೂತನ ತಾಲ್ಲೂಕುಗಳಿಗೆ ಬಿಡುಗಡೆಯಾಗಿರುವ ಜಿಲ್ಲಾವಾರು ಅನುದಾನದ ವಿವರ**

******

| ವಿಭಾಗ | ಜಿಲ್ಲೆ | | ಹೊಸ ತಾಲ್ಲೂಕಿನ ಹೆಸರು | | ಅನುದಾನದ ವಿವರ (ರೂ.ಲಕ್ಷಗಳಲ್ಲಿ) |
|---|---|---|---|---|---|
| ಬೆಂಗಳೂರು | 1. | ಬೆಂಗಳೂರು ನಗರ | 1. | ಯಲಹಂಕ | 41.50 |
| | 2. | ಕೋಲಾರ | 2. | ಕೆ.ಜಿ.ಎಫ್. | 41.50 |
| | 3. | ದಾವಣಗೆರೆ | 3. | ನ್ಯಾಮತಿ | 41.50 |
| | 4. | ರಾಮನಗರ | 4. | ಹಾರೋಹಳ್ಳಿ | 8.00 |
| | 5. | ಚಿಕ್ಕಬಳ್ಳಾಪುರ | 5. | ಚೇಳೂರು | 8.00 |
| | | | 6. | ಮಂಚೇನಹಳ್ಳಿ | 8.00 |
| ಮೈಸೂರು | 6. | ದಕ್ಷಿಣ ಕನ್ನಡ | 7. | ಮೂಡುಬಿದರೆ | 113.50 |
| | | | 8. | ಕಡಬ | |
| | | | 9. | ಉಳ್ಳಾಲ | |
| | | | 10. | ಮುಲ್ಕಿ | |
| | 7. | ಮೈಸೂರು | 11. | ಸರಗೂರು | 55.50 |
| | | | 12. | ಸಾಲಿಗ್ರಾಮ | |
| | 8. | ಚಿಕ್ಕಮಗಳೂರು | 13. | ಅಜ್ಜಂಪುರ | 53.00 |
| | | | 14. | ಕಳಸಾ | |
| | 9. | ಚಾಮರಾಜನಗರ | 15. | ಹನೂರು | 41.50 |
| | 10. | ಉಡುಪಿ | 16. | ಬ್ರಹ್ಮಾವರ | 166.00 |
| | | | 17. | ಕಾಪು | |
| | | | 18. | ಬೈಂದೂರು | |
| | | | 19. | ಹೆಬ್ರಿ | |
| | 11. | ಕೊಡಗು | 20. | ಪೊನ್ನಂಪೇಟೆ | 23.00 |
| | | | 21. | ಕುಶಾಲನಗರ | |
| ಬೆಳಗಾವಿ | 12. | ಬೆಳಗಾವಿ | 22. | ನಿಪ್ಪಾಣಿ | 132.50 |
| | | | 23. | ಮೂಡಲಗಿ | |
| | | | 24. | ಕಾಗವಾಡ | |
| | | | 25. | ಯರಗಟ್ಟಿ | |
| | 13. | ಬಾಗಲಕೋಟೆ | 26. | ಗುಳೇದಗುಡ್ಡ | 124.50 |
| | | | 27. | ರಬಕವಿ-ಬನಹಟ್ಟಿ | |
| | | | 28. | ಇಳಕಲ್ | |
| | 14. | ಧಾರವಾಡ | 29. | ಅಣ್ಣಿಗೇರಿ | 124.50 |
| | | | 30. | ಅಳ್ನಾವರ | |
| | | | 31. | ಹುಬ್ಬಳ್ಳಿ ನಗರ | |
| | 15. | ಗದಗ | 32. | ಗಜೇಂದ್ರಗಡ | 83.00 |
| | | | 33. | ಲಕ್ಷ್ಮೇಶ್ವರ | |
| | 16. | ಹಾವೇರಿ | 34. | ರಟ್ಟೆಹಳ್ಳಿ | 41.50 |
| | 17. | ಉತ್ತರ ಕನ್ನಡ | 35. | ದಾಂಡೇಲಿ | 41.50 |

| | | | | | |
|---|---|---|---|---|---|
| | 18. | ವಿಜಯಪುರ | 36. | ಬಬಲೇಶ್ವರ | 307.00 |
| | | | 37. | ನಿಡಗುಂದಿ | |
| | | | 38. | ತಿಕೋಟ | |
| | | | 39. | ದೇವರಹಿಪ್ಪರಗಿ | |
| | | | 40. | ತಾಳಿಕೋಟೆ | |
| | | | 41. | ಚಡಚಣ | |
| | | | 42. | ಕೊಲ್ಹಾರ | |
| | | | 43. | ಆಲಮೇಲ | |
| ಕಲಬುರಗಿ | 19. | ಬೀದರ್ | 44. | ಚಿಟಗುಪ್ಪ | 124.50 |
| | | | 45. | ಹುಲಸೂರು | |
| | | | 46. | ಕಮಲಾನಗರ | |
| | 20. | ಬಳ್ಳಾರಿ | 47. | ಕುರುಗೋಡು | 124.50 |
| | | | 48. | ಕೊಟ್ಟೂರು | |
| | | | 49. | ಕಂಪ್ಲಿ | |
| | 21. | ಕಲಬುರಗಿ | 50. | ಕಾಳಗಿ | 166.00 |
| | | | 51. | ಕಮಲಾಪೂರ | |
| | | | 52. | ಯಡ್ರಾಮಿ | |
| | | | 53. | ಶಹಾಬಾದ್ | |
| | 22. | ಯಾದಗಿರಿ | 54. | ಹುಣಸಗಿ | 124.50 |
| | | | 55. | ವಡಗೇರ | |
| | | | 56. | ಗುರುಮಿಟ್ಕಲ್ | |
| | 23. | ಕೊಪ್ಪಳ | 57. | ಕುಕನೂರು | 124.50 |
| | | | 58. | ಕನಕಗಿರಿ | |
| | | | 59. | ಕಾರಟಗಿ | |
| | 24. | ರಾಯಚೂರು | 60. | ಮಸ್ಕಿ | 91.00 |
| | | | 61. | ಸಿರವಾರ | |
| | | | 62. | ಅರಕೇರಾ | |

ಕನ್ನಡ ೩೦೦೪-3 LC9-30)

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಹೊಸದಾಗಿ ರಚನೆಯಾದ ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕು ಕಛೇರಿಗೆ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಪು 2019. ದಿನಾಂಕ:28-02-2019.
2. ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ ರವರ ಪತ್ರ ಸಂಖ್ಯೆ: ಇಎಸ್‌ಟಿ(2)ಸಿಆರ್:38/2021-22 ದಿನಾಂಕ:16-08-2021

** ** **

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1) ರಲ್ಲಿನ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಒಟ್ಟು 12 ತಾಲ್ಲೂಕುಗಳನ್ನು ರಚಿಸಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಪೈಕಿ ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕನ್ನು ರಚಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 08 ಎಲ್‌ಆರ್‌ಡಿ 2020, ದಿನಾಂಕ: 22-06-2021 ರಂದು ಅಂತಿಮ ಅಧಿಸೂಚನೆ ಹೊರಡಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ಮುಂದುವರಿದು, ಈ ತಾಲ್ಲೂಕಿನಲ್ಲಿ ತಾಲ್ಲೂಕು ಕಚೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅಗತ್ಯ ಹುದ್ದೆಗಳನ್ನು ಸೃಜಿಸುವಂತೆ ಕೋರಿ ಉಲ್ಲೇಖ (2) ರಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡಲು ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಕಳಸ ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಛೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ / 8 / ಎಲ್‌ಆರ್‌ಡಿ / 2020,**
**ಬೆಂಗಳೂರು, ದಿನಾಂಕ:26-11-2021**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ, ನೂತನವಾಗಿ ರಚನೆಯಾಗಿರುವ ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲು ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ:

| ಕ್ರ.ಸಂ | ಹುದ್ದೆಗಳ ವಿವರ | ತಹಸೀಲ್ದಾರ್ ಕಛೇರಿಗೆ ಮಂಜೂರು ಮಾಡಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ತಹಶೀಲ್ದಾರ್ (ಗ್ರೇಡ್-1) | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಶಿರಸ್ತೇದಾರ್ | 01 | |
| 4 | ಪ್ರಥಮ ದರ್ಜೆ ಸಹಾಯಕ | 02 | |
| 5 | ಆಹಾರ ನಿರೀಕ್ಷಕ | 01 | |
| 6 | ದ್ವಿತೀಯ ದರ್ಜೆ ಸಹಾಯಕ | 03 | |



Generated from eOffice by NAGARAJU S.B, RD-ASST2-SSLR(SB), ASSISTANT, REVENUE DEPATMENT SEC on 12/09/2022 04:11 PM

| | | | |
|---|---|---|---|
| 7 | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ |
| 8 | ಗ್ರೂಪ್-ಡಿ | 02 | |
| 9 | ವಾಹನ ಚಾಲಕ | 01 | |
| | **ಒಟ್ಟು** | **12** | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 651 ವೆಚ್ಚ-7/2021, ದಿನಾಂಕ: 16-11-2021 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

20/11/21

**(ಎಸ್.ಗುರುಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

O/C

**ಇವರಿಗೆ:**

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ವಿಭಾಗ.
3. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ.
5. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ
7. ಸರ್ಕಾರದ ಎಲ್ಲಾ ಜಂಟಿ / ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರುಗಳು.
8. ಸಂಬಂಧಪಟ್ಟ ಉಪ ವಿಭಾಗಾಧಿಕಾರಿ / ತಹಶೀಲ್ದಾರ್ ( ಜಿಲ್ಲಾಧಿಕಾರಿಯವರ ಮುಖಾಂತರ )
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

26/11/2021

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಹೊಸದಾಗಿ ರಚನೆಯಾದ ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲ್ಲೂಕು ಕಛೇರಿಗೆ ಕಂದಾಯ ಇಲಾಖೆಯ ಹುದ್ದೆಗಳನ್ನುಸೃಜಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಪು 2019, ದಿನಾಂಕ: 28-02-2019.
2. ಜಿಲ್ಲಾಧಿಕಾರಿ , ಮೈಸೂರು ಜಿಲ್ಲೆ ರವರ ಪತ್ರ ಸಂಖ್ಯೆ:MYSDC: ADM1:280 / 2019-20, ದಿನಾಂಕ:21 / 23-06-2021.

** ** **

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1) ರಲ್ಲಿನ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಒಟ್ಟು 12 ತಾಲ್ಲೂಕುಗಳನ್ನು ರಚಿಸಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಪೈಕಿ ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕನ್ನು ರಚಿಸಲು ದಿನಾಂಕ:31-12-2020 ರಂದು ಅಂತಿಮ ಅಧಿಸೂಚನೆ ಹೊರಡಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ಮುಂದುವರಿದು, ಈ ತಾಲ್ಲೂಕಿನಲ್ಲಿ ಹೊಸದಾಗಿ ತಾಲ್ಲೂಕು ಕಚೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅಗತ್ಯ ಹುದ್ದೆಗಳನ್ನು ಸೃಜಿಸುವಂತೆ ಕೋರಿ ಉಲ್ಲೇಖ (2) ರಲ್ಲಿ ಮೈಸೂರು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡಲು ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸಾಲಿಗ್ರಾಮ ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಛೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ / 7 / ಎಲ್ಆರ್‌ಡಿ / 2020,**
**ಬೆಂಗಳೂರು, ದಿನಾಂಕ:11-11-2021**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ, ನೂತನವಾಗಿ ರಚನೆಯಾಗಿರುವ ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲು ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ.

| ಕ್ರ.ಸಂ | ಹುದ್ದೆಗಳ ವಿವರ | ತಹಸೀಲ್ದಾರ್ ಕಛೇರಿಗೆ ಮಂಜೂರು ಮಾಡಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ತಹಶೀಲ್ದಾರ್ (ಗ್ರೇಡ್-1) | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ತಹಶೀಲ್ದಾರ್ (ಗ್ರೇಡ್-2) | 01 | |
| 3 | ಶಿರಸ್ತೇದಾರ್ | 02 | |
| 4 | ಪ್ರಥಮ ದರ್ಜೆ ಸಹಾಯಕ | 03 | |
| 5 | ಆಹಾರ ನಿರೀಕ್ಷಕ | 01 | |
| 6 | ದ್ವಿತೀಯ ದರ್ಜೆ ಸಹಾಯಕ | 04 | |



Generated from eOffice by NAGARAJU S.B, RD-ASST2-SSLR(SB), ASSISTANT, REVENUE DEPATMENT SEC on 12/09/2022 04:08 PM

| | | | |
|---|---|---|---|
| 7 | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ |
| 8 | ಗ್ರೂಪ್-ಡಿ | 03 | |
| 9 | ವಾಹನ ಚಾಲಕ | 01 | |
| | **ಒಟ್ಟು** | **17** | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 587 ವೆಚ್ಚ-7/2021, ದಿನಾಂಕ 11-10-2021 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/4/21

**(ಎಸ್. ಗುರುಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

O/C

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ವಿಭಾಗ.
3. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
4. ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.
5. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಎಲ್ಲಾ ಜಂಟಿ / ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರುಗಳು.
8. ಸಂಬಂಧಪಟ್ಟ ಉಪ ವಿಭಾಗಾಧಿಕಾರಿ / ತಹಶೀಲ್ದಾರ್ (ಜಿಲ್ಲಾಧಿಕಾರಿಯವರ ಮುಖಾಂತರ).
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ

12/11/2021



Generated from eOffice by NAGARAJU S.B, RD-ASST2-SSLR(SB), ASSISTANT, REVENUE DEPATMENT SEC on 12/09/2022 04:08 PM

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಹೊಸದಾಗಿ ರಚನೆಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ತಾಲ್ಲೂಕು ಕಛೇರಿಗೆ ಕಂದಾಯ ಇಲಾಖೆಯ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಪು 2019. ದಿನಾಂಕ:28-02-2019.
2. ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರ ಪತ್ರ ಸಂಖ್ಯೆ:ಎಡಿಯಂ (3) ಸಿಆರ್ 4 / 2019 / 63629 / ಎ1 ದಿನಾಂಕ:02-07-2021.

** ** **

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1) ರಲ್ಲಿನ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಒಟ್ಟು 12 ತಾಲ್ಲೂಕುಗಳನ್ನು ರಚಿಸಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ತಾಲ್ಲೂಕನ್ನು ದಿನಾಂಕ:19-02-2021 ರಂದು ಅಂತಿಮ ಅಧಿಸೂಚನೆ ಹೊರಡಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ಮುಂದುವರಿದು, ಈ ತಾಲ್ಲೂಕಿನಲ್ಲಿ ಹೊಸದಾಗಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅಗತ್ಯ ಹುದ್ದೆಗಳನ್ನು ಸೃಜಿಸುವಂತೆ ಕೋರಿ ಉಲ್ಲೇಖ (2) ರಲ್ಲಿ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಮುಲ್ಕಿ ತಾಲ್ಲೂಕು ಕೇಂದ್ರದಲ್ಲಿ ಹೊಸದಾಗಿ ತಹಸೀಲ್ದಾರ್ ಕಛೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ / 10 / ಎಲ್‌ಆರ್‌ಡಿ / 2019,**
**ಬೆಂಗಳೂರು, ದಿನಾಂಕ:11-11-2021**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ, ನೂತನವಾಗಿ ರಚನೆಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ತಾಲ್ಲೂಕಿಗೆ ಹೊಸದಾಗಿ ತಾಲ್ಲೂಕು ಕಚೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ತಹಸೀಲ್ದಾರ್ ಕಚೇರಿ, ಮುಲ್ಕಿ ತಾಲ್ಲೂಕಿಗೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ:

| ಕ್ರ.ಸಂ | ಹುದ್ದೆಗಳ ವಿವರ | ಪ್ರತಿ ತಾಲ್ಲೂಕು ಕಛೇರಿಗೆ ಮಂಜೂರು ಮಾಡಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ತಹಶೀಲ್ದಾರ್ (ಗ್ರೇಡ್-1) | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಶಿರಸ್ತೇದಾರ್ | 01 | |
| 4 | ಪ್ರಥಮ ದರ್ಜೆ ಸಹಾಯಕ | 02 | |
| 5 | ಆಹಾರ ನಿರೀಕ್ಷಕ | 01 | |
| 6 | ದ್ವಿತೀಯ ದರ್ಜೆ ಸಹಾಯಕ | 03 | |

1 |



Generated from eOffice by NAGARAJU S.B, RD-ASST2-SSLR(SB), ASSISTANT, REVENUE DEPATMENT SEC on 12/09/2022 04:13 PM

| | | | |
|---|---|---|---|
| 7 | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ |
| 8 | ಗ್ರೂಪ್-ಡಿ | 02 | |
| 9 | ವಾಹನ ಚಾಲಕ | 01 | |
| | **ಒಟ್ಟು** | **12** | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 588 ವೆಚ್ಚ-7/2021 ದಿನಾಂಕ 18-10-2021ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/4/21

**(ಎಸ್.ಗುರುಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

O/C

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು
3. ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
4. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ
6. ಸರ್ಕಾರದ ಎಲ್ಲಾ ಜಂಟಿ / ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರುಗಳು.
7. ಸಂಬಂಧಪಟ್ಟ ಉಪ ವಿಭಾಗಾಧಿಕಾರಿ / ತಹಶೀಲ್ದಾರ್ (ಜಿಲ್ಲಾಧಿಕಾರಿಯವರ ಮುಖಾಂತರ)
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ

ಹೊರಡಿಸಿದೆ
12/11/2021



Generated from eOffice by NAGARAJU S.B. RD-ASST2-SSLR(SB), ASSISTANT, REVENUE DEPATMENT SEC on 12/09/2022 04:13 PM

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೊಸದಾಗಿ ರಚನೆಯಾದ ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕು ಕಛೇರಿಗೆ ಕಂದಾಯ ಇಲಾಖೆಯ ಹುದ್ದೆಗಳನ್ನುಸೃಜಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಖ 2019, ದಿನಾಂಕ:28-02-2019.
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 01 ಎಲ್ಆರ್‌ಡಿ 2020, ದಿನಾಂಕ:03-07-2020.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ(1)ರಲ್ಲಿನ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಕೊಡಗು ಜಿಲ್ಲೆ ಪೊನ್ನಂಪೇಟೆ ಸೇರಿದಂತೆ ಒಟ್ಟು 12 ತಾಲ್ಲೂಕುಗಳನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ರಚಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಗಳನ್ನು ಹೊರಡಿಸಲಾಗಿದೆ.

ಸದರಿ ಹೊಸ ತಾಲ್ಲೂಕು ರಚನೆಗೆ ಸಂಬಂಧಿಸಿದಂತೆ ಈಗಾಗಲೇ ಕೊಡಗು ಜಿಲ್ಲೆಯ ಪೊನ್ನಂಪೇಟೆ ನೂತನ ತಾಲ್ಲೂಕನ್ನು ರಚಿಸಿ, ದಿನಾಂಕ:03-07-2020ರಂದು ಅಂತಿಮ ಅಧಿಸೂಚನೆ ಹೊರಡಿಸಿದ್ದು, ದಿನಾಂಕ:20-08-2020ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿದೆ. ಪ್ರಸ್ತಾವಿತ ಹೊಸ ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ ಪೊನ್ನಂಪೇಟೆ ತಾಲ್ಲೂಕು ಕೇಂದ್ರದಲ್ಲಿ ತಾಲ್ಲೂಕು ಕಛೇರಿಯನ್ನು ಅಸ್ತಿತ್ವಕ್ಕೆ ತರುವ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/27/ಎಲ್‌ಆರ್‌ಡಿ/2020, ಬೆಂಗಳೂರು, ದಿನಾಂಕ:25-11-2020.**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕು ಕಛೇರಿಗೆ ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ:

| ಕ್ರ.ಸಂ | ಹುದ್ದೆಗಳವಿವರ | ಹುದ್ದೆಗಳಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ತಹಶೀಲ್ದಾರ್ (ಗ್ರೇಡ್-1) | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಶಿರಸ್ತೇದಾರ್ | 01 | |
| 3 | ಪ್ರಥಮ ದರ್ಜೆ ಸಹಾಯಕ | 02 | |
| 4 | ಆಹಾರ ನಿರೀಕ್ಷಕ | 01 | |
| 5 | ದ್ವಿತೀಯ ದರ್ಜೆ ಸಹಾಯಕ | 03 | |
| 6 | ಬೆರಳಚ್ಚುಗಾರ / ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ |
| 7 | ಗ್ರೂಪ್-ಡಿ | 02 | |
| 8 | ವಾಹನ ಚಾಲಕ | 01 | |
| | **ಒಟ್ಟು** | **12** | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 416 ವೆಚ್ಚ-7/2020 ದಿನಾಂಕ: 23-11-2020ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ,

Rajyashree V.T
25/11

**(ವಿ.ಟಿ.ರಾಜ್ಯಶ್ರೀ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಇವರಿಗೆ:

1) ಮಹಾಲೇಖಪಾಲರು (ಎ & ಇ) (ಲೆಕ್ಕ ಪತ್ರ) (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.

Generated from eOffice by NAGARAJU-S.B, RD-ASST2-SSLR(SB), ASSISTANT, REVENUE DEPATMENT SEC on 12/09/2022 04:20 PM

3) ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಕೇರಿ.
4) ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
5) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆಯವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು
7) ಸರ್ಕಾರದ ಅಪರ ಕಾರ್ಯದರ್ಶಿ / ಜಂಟಿ / ಉಪ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರುಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
8) ಸಂಬಂಧಪಟ್ಟ ಉಪ ವಿಭಾಗಾಧಿಕಾರಿ / ತಹಶೀಲ್ದಾರ್ (ಜಿಲ್ಲಾಧಿಕಾರಿಯವರ ಮುಖಾಂತರ)
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.



Generated from eOffice by NAGARAJU S.B, RD-ASST2-SSLR(SB), ASSISTANT, REVENUE DEPATMENT SEC on 12/09/2022 04:20 PM

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಹೊಸದಾಗಿ ರಚನೆಯಾದ ವಿಜಯಪುರ ಜಿಲ್ಲೆ ಅಲಮೇಲ, ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ಹಾಗೂ ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕು ಕಛೇರಿಗೆ ಕಂದಾಯ ಇಲಾಖೆಯ ಹುದ್ದೆಗಳನ್ನುಸೃಜಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಪು 2019, ದಿನಾಂಕ:28-02-2019.
2. ಜಿಲ್ಲಾಧಿಕಾರಿ , ವಿಜಯಪುರ ಜಿಲ್ಲೆ ರವರ ಪತ್ರ ಸಂಖ್ಯೆ:ಕವಿ:ಸಿಬ್ಬಂದಿ:1: ವಿವ: 65/2020-21, ದಿನಾಂಕ:18-01-2021.
3. ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ:ಎಡಿಯಂ (3)ಸಿಆರ್4/2019/63629ಎ1, ದಿನಾಂಕ:17-10-2020.
4. ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ ರವರ ಪತ್ರ ಸಂಖ್ಯೆ:ಆರ್‌ಕೆಎಲ್/08/2019-20 , ದಿನಾಂಕ:12-01-2021.

** ** **

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ(1) ರಲ್ಲಿನ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಒಟ್ಟು 12 ತಾಲ್ಲೂಕುಗಳನ್ನು ರಚಿಸಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಪೈಕಿ ವಿಜಯಪುರ ಜಿಲ್ಲೆಯ ಅಲಮೇಲ ತಾಲ್ಲೂಕನ್ನು ದಿನಾಂಕ:08-10-2020 ರಂದು, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲ್ಲೂಕನ್ನು ದಿನಾಂಕ:03-09-2020 ರಂದು ಹಾಗೂ ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕನ್ನು ದಿನಾಂಕ:31-12-2020 ರಂದು ಅಂತಿಮ ಅಧಿಸೂಚನೆ ಹೊರಡಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತವೆ. ಮುಂದುವರಿದು, ಈ ತಾಲ್ಲೂಕುಗಳಲ್ಲಿ ತಾಲ್ಲೂಕು ಕಚೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅಗತ್ಯ ಹುದ್ದೆಗಳನ್ನು ಸೃಜಿಸುವಂತೆ ಕೋರಿ ಉಲ್ಲೇಖ (2) ರಿಂದ ಉಲ್ಲೇಖ (4)ರವರೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಅಲಮೇಲ, ಉಳ್ಳಾಲ ಮತ್ತು ಕುಶಾಲನಗರ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಛೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/27/ಎಲ್‌ಆರ್‌ಡಿ/2020, ಬೆಂಗಳೂರು, ದಿನಾಂಕ:16-04-2021**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ, ನೂತನವಾಗಿ ರಚನೆಯಾಗಿರುವ ವಿಜಯಪುರ ಜಿಲ್ಲೆಯ ಅಲಮೇಲ, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಹಾಗೂ ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕು ಕಛೇರಿಗಳಿಗೆ ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ.

| ಕ್ರ.ಸಂ | ಹುದ್ದೆಗಳ ವಿವರ | ಪ್ರತಿ ತಾಲ್ಲೂಕು ಕಛೇರಿಗೆ ಮಂಜೂರು ಮಾಡಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ತಹಶೀಲ್ದಾರ್ (ಗ್ರೇಡ್-1) | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಶಿರಸ್ತೇದಾರ್ | 01 | |
| 3 | ಪ್ರಥಮ ದರ್ಜೆ ಸಹಾಯಕ | 02 | |
| 4 | ಆಹಾರ ನಿರೀಕ್ಷಕ | 01 | |
| 5 | ದ್ವಿತೀಯ ದರ್ಜೆ ಸಹಾಯಕ | 03 | |
| 6 | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ |
| 7 | ಗ್ರೂಪ್-ಡಿ | 02 | |
| 8 | ವಾಹನ ಚಾಲಕ | 01 | |
| | **ಒಟ್ಟು** | **12** | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 504 ವೆಚ್ಚ-7/2020, ದಿನಾಂಕ: 31-03-2021ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/4/21

(ಎಸ್.ಗುರುಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

ಇವರಿಗೆ:

1. ಮಹಾಲೇಖಪಾಲರು (ಎ & ಇ) / (ಲೆಕ್ಕ ಪತ್ರ) / (ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಮೈಸೂರು / ಬೆಳಗಾವಿ ವಿಭಾಗ.
3. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ವಿಜಯಪುರ / ದಕ್ಷಿಣ ಕನ್ನಡ / ಕೊಡಗು ಜಿಲ್ಲೆಗಳು.
5. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ
7. ಸರ್ಕಾರದ ಎಲ್ಲಾ ಜಂಟಿ / ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರುಗಳು,
8. ಸಂಬಂಧಪಟ್ಟ ಉಪ ವಿಭಾಗಾಧಿಕಾರಿ / ತಹಶೀಲ್ದಾರ್ (ಜಿಲ್ಲಾಧಿಕಾರಿಯವರ ಮುಖಾಂತರ)
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಹೊಸದಾಗಿ ರಚನೆಯಾದ ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲ್ಲೂಕಿನ ತಹಸೀಲ್ದಾರ್ ಕಛೇರಿಗೆ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಪು 2019, ದಿನಾಂಕ: 28-02-2019.
2. ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ರವರ ಪತ್ರ ಸಂಖ್ಯೆ: ಆರ್.ಇ.ವಿ/ಸಿಆರ್/20/2019-20 ದಿನಾಂಕ:23-03-2022.

** ** **

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1) ರಲ್ಲಿನ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಒಟ್ಟು 12 ತಾಲ್ಲೂಕುಗಳನ್ನು ರಚಿಸಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಪೈಕಿ ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲ್ಲೂಕನ್ನು ರಚಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 33 ಎಲ್ಆರ್‌ಡಿ 2020, ದಿನಾಂಕ: 23-12-2021 ರಂದು ಅಂತಿಮ ಅಧಿಸೂಚನೆ ಹೊರಡಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ಮುಂದುವರಿದು, ಈ ತಾಲ್ಲೂಕಿನಲ್ಲಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅಗತ್ಯ ಹುದ್ದೆಗಳನ್ನು ಸೃಜಿಸುವಂತೆ ಕೋರಿ ಉಲ್ಲೇಖ (2) ರಲ್ಲಿ ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡಲು ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಯರಗಟ್ಟಿ ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಛೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 33 ಎಲ್ಆರ್‌ಡಿ 2020**
**ಬೆಂಗಳೂರು, ದಿನಾಂಕ:14-07-2021**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ, ನೂತನವಾಗಿ ರಚನೆಯಾಗಿರುವ ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲು ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ:

| ಕ್ರ.ಸಂ | ಹುದ್ದೆಗಳ ವಿವರ | ತಹಸೀಲ್ದಾರ್ ಕಛೇರಿಗೆ ಮಂಜೂರು ಮಾಡಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1. | ತಹಶೀಲ್ದಾರ್ (ಗ್ರೇಡ್-1) | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2. | ಶಿರಸ್ತೇದಾರ್ | 01 | |
| 3. | ಪ್ರಥಮ ದರ್ಜೆ ಸಹಾಯಕ | 02 | |
| 4. | ಆಹಾರ ನಿರೀಕ್ಷಕ | 01 | |
| 5. | ದ್ವಿತೀಯ ದರ್ಜೆ ಸಹಾಯಕ | 03 | |
| 6. | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ |
| 7. | ಗ್ರೂಪ್-ಡಿ | 02 | |
| 8. | ವಾಹನ ಚಾಲಕ | 01 | |
| | **ಒಟ್ಟು** | **12** | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 430 ವೆಚ್ಚ-7/2022, ದಿನಾಂಕ: 20-06-2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

14/7/22

**(ಎಸ್. ಗುರುಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

14/7/22

**ಇವರಿಗೆ:**

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ವಿಭಾಗ.
3. ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ, ಬೆಳಗಾವಿ
4. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ
6. ಸರ್ಕಾರದ ಎಲ್ಲಾ ಜಂಟಿ / ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರುಗಳು,
7. ಬೆಳಗಾವಿ ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿ / ತಹಸೀಲ್ದಾರ್ (ಜಿಲ್ಲಾಧಿಕಾರಿಯವರ ಮುಖಾಂತರ )
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಹೊಸದಾಗಿ ರಚನೆಯಾದ ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ತಾಲ್ಲೂಕಿನ ತಹಸೀಲ್ದಾರ್ ಕಛೇರಿಗೆ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಭೂದಾಪು 2019, ದಿನಾಂಕ: 28-02-2019.
2. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರ ಪತ್ರ ಸಂಖ್ಯೆ: ಎ.ಡಿ.ಎಂ/ಸಿಆರ್/79/2016-17 ದಿನಾಂಕ:20-06-2022.

** ** **

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1) ರಲ್ಲಿನ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಒಟ್ಟು 12 ತಾಲ್ಲೂಕುಗಳನ್ನು ರಚಿಸಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಪೈಕಿ ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ತಾಲ್ಲೂಕಿಗೆ ಗ್ರಾಮಗಳನ್ನು ಸೇರ್ಪಡೆ ಮಾಡಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ58ಎಲ್ಆರ್‌ಡಿ 2021, ದಿನಾಂಕ: 23-03-2022 ರಂದು ಅಂತಿಮ ಅಧಿಸೂಚನೆ ಹೊರಡಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ಮುಂದುವರಿದು, ಈ ತಾಲ್ಲೂಕಿನಲ್ಲಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅಗತ್ಯ ಹುದ್ದೆಗಳನ್ನು ಸೃಜಿಸಲು ಕೋರಿ ಉಲ್ಲೇಖ (2) ರಲ್ಲಿ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡಲು ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಚೇಳೂರು ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಛೇರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 58 ಎಲ್ಆರ್‌ಡಿ 2021**
**ಬೆಂಗಳೂರು, ದಿನಾಂಕ:06-09-2022**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ, ನೂತನವಾಗಿ ರಚನೆಯಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ತಾಲ್ಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲು ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ:

| ಕ್ರ.ಸಂ | ಹುದ್ದೆಗಳ ವಿವರ | ತಹಸೀಲ್ದಾರ್ ಕಛೇರಿಗೆ ಮಂಜೂರು ಮಾಡಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1. | ತಹಶೀಲ್ದಾರ್ (ಗ್ರೇಡ್-1) | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2. | ಶಿರಸ್ತೇದಾರ್ | 01 | |
| 3. | ಪ್ರಥಮ ದರ್ಜೆ ಸಹಾಯಕ | 02 | |
| 4. | ಆಹಾರ ನಿರೀಕ್ಷಕ | 01 | |
| 5. | ದ್ವಿತೀಯ ದರ್ಜೆ ಸಹಾಯಕ | 03 | |
| 6. | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ |
| 7. | ಗ್ರೂಪ್-ಡಿ | 02 | |
| 8. | ವಾಹನ ಚಾಲಕ | 01 | |
| | **ಒಟ್ಟು** | **12** | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 685 ವೆಚ್ಚ-7/ 2022, ದಿನಾಂಕ:24-08-2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6/9/22

(ಎಸ್. ಗುರುಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

7/9/22

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ವಿಭಾಗ.
3. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
4. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ
6. ಸರ್ಕಾರದ ಎಲ್ಲಾ ಅಪರ / ಜಂಟಿ / ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರುಗಳು,
7. ಉಪ ವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ / ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಹಸೀಲ್ದಾರರು (ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರ ಮುಖಾಂತರ )
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

<u>**ಕರ್ನಾಟಕ ಸರ್ಕಾರದ ನಡವಳಿಗಳು**</u>

ವಿಷಯ: 2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಹೊಸ ತಾಲ್ಲೂಕುಗಳ ತಾಲ್ಲೂಕು ಕಚೇರಿಗಳಿಗೆ ಅನ್ವಯವಾಗುವಂತೆ ಕಂದಾಯ ಇಲಾಖೆಯ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ ಕಂಇ 35 ಭೂದಾಮ 2017 ದಿನಾಂಕ: 06.09.2017 & 16.10.2017.

2) <u>ಸರ್ಕಾರದ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 928 ವೆಚ್ಚ-7/2017</u> ದಿನಾಂಕ: 16.01.2018.

****

<u>ಪ್ರಸ್ತಾವನೆ:-</u>

ಮೇಲೆ ಓದಲಾದ ಕ್ರ ಸಂ (1) ರಲ್ಲಿನ ಆದೇಶಗಳಲ್ಲಿ ವಿವರಿಸಿರುವಂತೆ 2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಒಟ್ಟು 50 ಹೊಸ ತಾಲ್ಲೂಕುಗಳನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಜನವರಿ 2018 ರಿಂದ ಅನ್ವಯವಾಗುವಂತೆ ರಚಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಗಳನ್ನು ಹೊರಡಿಸಲಾಗಿದೆ.

ಸದರಿ ಹೊಸ ತಾಲ್ಲೂಕು ರಚನೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು ನಿಯಮಾನುಸಾರ ಅಂತಿಮ ಅಧಿಸೂಚನೆಗಳನ್ನು ಹೊರಡಿಸಲು ಕ್ರಮ ವಹಿಸಲಾಗಿದೆ. ಪ್ರಸ್ತಾವಿತ ಹೊಸ ತಾಲ್ಲೂಕುಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ 2018 ರ ಜನವರಿಯಿಂದ ಹೊಸ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಚೇರಿಯನ್ನು ಅಸ್ತಿತ್ವಕ್ಕೆ ತರಲು ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ ಕಂಇ 35 ಭೂದಾಮ 2017, ಬೆಂಗಳೂರು ದಿನಾಂಕ: 17-01-2018</u>

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಯಲಹಂಕ; ಕೋಲಾರ ಜಿಲ್ಲೆಯ ಕೆ.ಜಿ.ಎಫ್; ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ; ದಾವಣಗೆರೆ ಜಿಲ್ಲೆಯ ನ್ಯಾಮತಿ; ಮೈಸೂರು ಜಿಲ್ಲೆಯ ಸರಗೂರು; ಚಾಮರಾಜನಗರ ಜಿಲ್ಲೆಯ ಹನೂರು; ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ & ಕಡಬ; ಉಡುಪಿ ಜಿಲ್ಲೆಯ ಬ್ರಹ್ಮಾವರ, ಕಾಪು & ಬೈಂದೂರು; ಗದಗ ಜಿಲ್ಲೆಯ ಗಜೇಂದ್ರಗಡ & ಲಕ್ಷ್ಮೇಶ್ವರ; ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ; ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಮೂಡಲಗಿ & ಕಾಗವಾಡ; ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರ; ಬಾಗಲಕೋಟ ಜಿಲ್ಲೆಯ ರಬಕವಿ-ಬನಹಟ್ಟಿ & ಇಳಕಲ್; ವಿಜಯಪುರ ಜಿಲ್ಲೆಯ ಬಬಲೇಶ್ವರ, ದೇವರಹಿಪ್ಪರಗಿ, ತಿಕೋಟ & ಚಡಚಣ; ಬಳ್ಳಾರಿ ಜಿಲ್ಲೆಯ ಕುರುಗೋಡು, ಕೊಟ್ಟೂರು & ಕಂಪ್ಲಿ; ಬೀದರ ಜಿಲ್ಲೆಯ ಚಿಟಗುಪ್ಪ & ಕಮಲಾನಗರ; ಕಲಬುರಗಿ ಜಿಲ್ಲೆಯ ಕಮಲಾಪುರ, ಯಡ್ರಾಮಿ & ಶಹಾಬಾದ; ಯಾದಗಿರಿ ಜಿಲ್ಲೆಯ ಹುಣಸಗಿ, ವಡಗೇರಾ & ಗುರುಮಿಟಕಲ್; ಕೊಪ್ಪಳ ಜಿಲ್ಲೆಯ ಕುಕನೂರು, ಕನಕಗಿರಿ & ಕಾರಟಗಿ ಮತ್ತು ರಾಯಚೂರು ಜಿಲ್ಲೆಯ ಮಸ್ಕಿ & ಸಿರವಾರ

(ಒಟ್ಟು 40 ತಾಲ್ಲೂಕುಗಳು) ಹೊಸ ತಾಲ್ಲೂಕುಗಳಿಗೆ ಪ್ರತಿ ತಾಲ್ಲೂಕು ಕಚೇರಿಗೆ ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ:-

| ಕ್ರಸಂ | ಅಧಿಕಾರಿ / ಸಿಬ್ಬಂದಿ ವಿವರ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ತಹಶೀಲ್ದಾರ್ ಗ್ರೇಡ್-1 | 01 | ವೃಂದ & ನೇಮಕಾತಿ ನಿಯಮಗಳನ್ವಯ |
| 2 | ತಹಶೀಲ್ದಾರ್ ಗ್ರೇಡ್-2 | 01 | |
| 3 | ಶಿರಸ್ತೇದಾರ | 02 | |
| 4 | ಪ್ರಥಮ ದರ್ಜೆ ಸಹಾಯಕ | 03 | |
| 5 | ಆಹಾರ ನಿರೀಕ್ಷಕ | 01 | |
| 6 | ದ್ವಿತೀಯ ದರ್ಜೆ ಸಹಾಯಕ | 04 | |
| 7 | ಬೆರಳಚ್ಚುಗಾರ / ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ ಆಧಾರದ ಮೇಲೆ |
| 8 | ಗ್ರೂಪ್ 'ಡಿ' ದರ್ಜೆ ನೌಕರ | 03 | |
| 9 | ವಾಹನ ಚಾಲಕ | 01 | |
| | ಒಟ್ಟು | **17** | |

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 928 ವೆಚ್ಚ-7/2017 ದಿನಾಂಕ: 16.01.2018 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
17/01/18
(ಕ್ಯಾಪ್ಟನ್. ಡಾ|| ಕೆ.ರಾಜೇಂದ್ರ)
ನಿರ್ದೇಶಕರು, ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಕಂದಾಯ ಇಲಾಖೆ

ಇವರಿಗೆ:

1) ಮಹಾಲೇಖಪಾಲರು (ಎ&ಇ) (ಲೆಕ್ಕಪತ್ರ) (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2) ಎಲ್ಲಾ ಪ್ರಾದೇಶಿಕ ಆಯುಕ್ತರು.
3) ಜಿಲ್ಲಾಧಿಕಾರಿ, ಬೆಂಗಳೂರು ನಗರ / ಕೋಲಾರ / ಚಿಕ್ಕಮಗಳೂರು / ದಾವಣಗೆರೆ / ಮೈಸೂರು ಚಾಮರಾಜನಗರ / ದಕ್ಷಿಣ ಕನ್ನಡ / ಉಡುಪಿ / ಗದಗ / ಹಾವೇರಿ / ಬೆಳಗಾವಿ / ಧಾರವಾಡ ಬಾಗಲಕೋಟ / ವಿಜಯಪುರ / ಬಳ್ಳಾರಿ / ಬೀದರ / ಕಲಬುರಗಿ / ಯಾದಗಿರಿ / ಕೊಪ್ಪಳ/ ರಾಯಚೂರು ಜಿಲ್ಲೆ.
4) ಆಯುಕ್ತರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು.
5) ಮಾನ್ಯ ಕಂದಾಯ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆಇವರ ಆಪ್ತಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
7) ಸರ್ಕಾರದ ಉಪಕಾರ್ಯದರ್ಶಿ, ಕಂದಾಯ ಇಲಾಖೆ (ಭೂಮಾಪನ & ಸೇವೆಗಳು-1) ಇವರ ಆಪ್ತಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
8) ಸಂಬಂಧಪಟ್ಟ ಉಪವಿಭಾಗಾಧಿಕಾರಿ / ತಹಶೀಲ್ದಾರ್ (ಜಿಲ್ಲಾಧಿಕಾರಿಯವರ ಮುಖಾಂತರ)
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಹೊಸ ತಾಲ್ಲೂಕುಗಳ ತಾಲ್ಲೂಕು ಕಚೇರಿಗಳಿಗೆ ಅನ್ವಯವಾಗುವಂತೆ ಕಂದಾಯ ಇಲಾಖೆಯ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ ಕಂಇ 35 ಭೂದಾಪು 2017 ದಿನಾಂಕ: 06.09.2017 & 16.10.2017.

2) ಸರ್ಕಾರದ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 928 ವೆಚ್ಚ-7/2017 ದಿನಾಂಕ: 16.01.2018.

****

<u>ಪ್ರಸ್ತಾವನೆ:-</u>

ಮೇಲೆ ಓದಲಾದ ಕ್ರ ಸಂ (1) ರಲ್ಲಿನ ಆದೇಶಗಳಲ್ಲಿ ವಿವರಿಸಿರುವಂತೆ 2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಒಟ್ಟು 50 ಹೊಸ ತಾಲ್ಲೂಕುಗಳನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಜನವರಿ 2018 ರಿಂದ ಅನ್ವಯವಾಗುವಂತೆ ರಚಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಗಳನ್ನು ಹೊರಡಿಸಲಾಗಿದೆ.

ಸದರಿ ಹೊಸ ತಾಲ್ಲೂಕು ರಚನೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು ನಿಯಮಾನುಸಾರ ಅಂತಿಮ ಅಧಿಸೂಚನೆಗಳನ್ನು ಹೊರಡಿಸಲು ಕ್ರಮ ವಹಿಸಲಾಗಿದೆ. ಪ್ರಸ್ತಾವಿತ ಹೊಸ ತಾಲ್ಲೂಕುಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಮತ್ತು ಪರಿಣಾಮಕಾರಿಯಾಗಿ ಸಮರ್ಥ ಆಡಳಿತ ನೀಡುವ ಸಲುವಾಗಿ 2018 ರ ಜನವರಿಯಿಂದ ಹೊಸ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಚೇರಿಯನ್ನು ಅಸ್ತಿತ್ವಕ್ಕೆ ತರಲು ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ ಕಂಇ 35 ಭೂದಾಪು 2017, ಬೆಂಗಳೂರು ದಿನಾಂಕ: 17-01-2018</u>

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ಹೆಬ್ರಿ; ಧಾರವಾಡ ಜಿಲ್ಲೆಯ ಅಣ್ಣಿಗೇರಿ & ಅಳ್ನಾವರ; ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ; ಬಾಗಲಕೋಟ ಜಿಲ್ಲೆಯ ಗುಳೇದಗುಡ್ಡ; ವಿಜಯಪುರ ಜಿಲ್ಲೆಯ ನಿಡಗುಂದಿ, ತಾಳಿಕೋಟೆ & ಕೊಲ್ಹಾರ; ಬೀದರ ಜಿಲ್ಲೆಯ ಹುಲಸೂರು ಮತ್ತು ಕಲಬುರಗಿ ಜಿಲ್ಲೆಯ ಕಾಳಗಿ (ಒಟ್ಟು 10 ತಾಲ್ಲೂಕುಗಳು); ಹೊಸ ತಾಲ್ಲೂಕುಗಳಿಗೆ ಪ್ರತಿ ತಾಲ್ಲೂಕು ಕಚೇರಿಗೆ ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ:-

| ಕ್ರಸಂ | ಅಧಿಕಾರಿ / ಸಿಬ್ಬಂದಿ ವಿವರ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| | ತಹಶೀಲ್ದಾರ್ ಗ್ರೇಡ್-1 | 01 | ವೃಂದ & ನೇಮಕಾತಿ ನಿಯಮಗಳನ್ವಯ |
| | ತಹಶೀಲ್ದಾರ್ ಗ್ರೇಡ್-2 | 0 | |
| | ಶಿರಸ್ತೇದಾರ | 01 | |

| | | | |
|---|---|---|---|
| 4 | ಪ್ರಥಮ ದರ್ಜೆ ಸಹಾಯಕ | 02 | |
| 5 | ಆಹಾರ ನಿರೀಕ್ಷಕ | 01 | |
| 6 | ದ್ವಿತೀಯ ದರ್ಜೆ ಸಹಾಯಕ | 03 | |
| 7 | ಬೆರಳಚ್ಚುಗಾರ / ಡಾಟಾ ಎಂಟ್ರಿ ಆಪರೇಟರ್ | 01 | ಹೊರಗುತ್ತಿಗೆ ಆಧಾರದ ಮೇಲೆ |
| 8 | ಗ್ರೂಪ್ 'ಡಿ' ದರ್ಜೆ ನೌಕರ | 02 | |
| 9 | ವಾಹನ ಚಾಲಕ | 01 | |
| | ಒಟ್ಟು | 12 | |

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 928 ವೆಚ್ಚ-7/2017 ದಿನಾಂಕ: 16.01.2018 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

17/01/18

(ಕ್ಯಾಪ್ಟನ್. ಡಾ॥ ಕೆ.ರಾಜೇಂದ್ರ)
ನಿರ್ದೇಶಕರು,- ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಕಂದಾಯ ಇಲಾಖೆ

ಇವರಿಗೆ:

1) ಮಹಾಲೇಖಪಾಲರು (ಎ&ಇ) (ಲೆಕ್ಕಪತ್ರ) (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2) ಎಲ್ಲಾ ಪ್ರಾದೇಶಿಕ ಆಯುಕ್ತರು.
3) ಜಿಲ್ಲಾಧಿಕಾರಿ, ಉಡುಪಿ / ಧಾರವಾಡ / ಉತ್ತರಕನ್ನಡ. / ಬಾಗಲಕೋಟ / ವಿಜಯಪುರ / ಬೀದರ / ಕಲಬುರಗಿ / ಯಾದಗಿರಿ ಜಿಲ್ಲೆ.
4) ಆಯುಕ್ತರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು.
5) ಮಾನ್ಯ ಕಂದಾಯ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
7) ಸರ್ಕಾರದ ಉಪಕಾರ್ಯದರ್ಶಿ, ಕಂದಾಯ ಇಲಾಖೆ (ಭೂಮಾಪನ & ಸೇವೆಗಳು-1) ಇವರ ಆಪ್ತಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
8) ಸಂಬಂಧಪಟ್ಟ ಉಪವಿಭಾಗಾಧಿಕಾರಿ / ತಹಶೀಲ್ದಾರ್ (ಜಿಲ್ಲಾಧಿಕಾರಿಯವರ ಮುಖಾಂತರ)
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಹೊಸ ತಾಲ್ಲೂಕುಗಳ ತಾಲ್ಲೂಕು ಕಛೇರಿಗಳಿಗೆ ಅನ್ವಯವಾಗುವಂತೆ ಕಂದಾಯ ಇಲಾಖೆಯ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಭೂದಾಖ 2017 ದಿನಾಂಕ: 06.09.2017.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಭೂದಾಖ 2017 ದಿನಾಂಕ: 16.10.2017
3. ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಭೂದಾಖ 2017 ದಿನಾಂಕ: 17.01.2018.

****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ.(1) ಮತ್ತು (2) ರಲ್ಲಿನ ಆದೇಶಗಳಲ್ಲಿ ವಿವರಿಸಿರುವಂತೆ 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಒಟ್ಟು 50 ಹೊಸ ತಾಲ್ಲೂಕುಗಳನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಜನವರಿ 2018 ರಿಂದ ಅನ್ವಯವಾಗುವಂತೆ ರಚಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಗಳನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರ:ಸಂ.(3)ರ ಆದೇಶದಲ್ಲಿ 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಹೊಸ ತಾಲ್ಲೂಕುಗಳಿಗೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸುವ ಕುರಿತಂತೆ 50 ಗ್ರಾಮಗಳಿಗಿಂತ ಹೆಚ್ಚು ಗ್ರಾಮಗಳನ್ನು ಹೊಂದಿರುವ ಒಂದು ಲಕ್ಷಕ್ಕಿಂತಲೂ ಅಧಿಕ ಜನಸಂಖ್ಯೆ ಹೊಂದಿರುವ ಪ್ರತಿ ತಾಲ್ಲೂಕಿಗೆ ಒಟ್ಟು 17 ಹುದ್ದೆಗಳನ್ನು (40 ತಾಲ್ಲೂಕುಗಳಿಗೆ) ಮತ್ತು 50 ಗ್ರಾಮಗಳಿಗಿಂತ ಕಡಿಮೆ ಗ್ರಾಮಗಳನ್ನು ಹೊಂದಿರುವ ಹಾಗೂ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಪ್ರತಿ ತಾಲ್ಲೂಕಿಗೆ(10 ತಾಲ್ಲೂಕುಗಳಿಗೆ) ಒಟ್ಟು 12 ಹುದ್ದೆಗಳನ್ನು ಸೃಜಿಸಿ ಆದೇಶವನ್ನು ಹೊರಡಿಸಲಾಗಿತ್ತು.

50 ಹೊಸ ತಾಲ್ಲೂಕುಗಳನ್ನು ರಚಿಸಿ ಹೊರಡಿಸಿದ ಅಂತಿಮ ಅಧಿಸೂಚನೆಗಳ ನಂತರ ಈ ಕೆಳಕಂಡ ಹೊಸ ತಾಲ್ಲೂಕುಗಳಿಗೆ ಸೇರ್ಪಡೆಯಾಗುವ ಗ್ರಾಮಗಳ ಸಂಖ್ಯೆ ಮತ್ತು ಜನಸಂಖ್ಯೆಯಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ.

| ಕ್ರಮ ಸಂಖ್ಯೆ | ಜಿಲ್ಲೆ | ಹೊಸ ತಾಲ್ಲೂಕಿನ ಹೆಸರು | ಒಟ್ಟು ಗ್ರಾಮಗಳ ಸಂಖ್ಯೆ | 2011ರ ಜನಗಣತಿಯಂತೆ ಒಟ್ಟು ಜನಸಂಖ್ಯೆ |
|---|---|---|---|---|
| 1 | ಕಲಬುರಗಿ | ಕಾಳಗಿ | 61 | 1.10.033 |
| 2 | ವಿಜಯಪುರ | ತಾಳಿಕೋಟೆ | 58 | 1.32.143 |
| 3 | ವಿಜಯಪುರ | ನಿಡಗುಂದಿ | 43 | 1.06.280 |

ಈ ಮೇಲಿನ 3 ಹೊಸ ತಾಲ್ಲೂಕುಗಳಿಗೆ ಒಟ್ಟು 12 ಹುದ್ದೆಗಳನ್ನು (ಪ್ರತಿ ತಾಲ್ಲೂಕಿಗೆ) ಸೃಜಿಸಿ ದಿನಾಂಕ: 17.01.2018 ರಂದು ಹೊರಡಿಸಿರುವ ಸರ್ಕಾರಿ ಆದೇಶದಲ್ಲಿ ಮಂಜೂರಾದ ಹುದ್ದೆಗಳ ಜೊತೆಗೆ ಅವಶ್ಯಕವಿರುವ ಹುದ್ದೆಗಳನ್ನು ಸೃಜಿಸಲು ಸರ್ಕಾರವು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

***ಸರ್ಕಾರದ ಆದೇಶ ಸಂಖ್ಯೆ:ಕಂಇ 35 ಭೂದಾಮ 2017, ಬೆಂಗಳೂರು, ದಿನಾಂಕ:17.07.2018***

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲೆಯ ಕಾಳಗಿ. ವಿಜಯಪುರ ಜಿಲ್ಲೆಯ ತಾಳಿಕೋಟೆ ಮತ್ತು ನಿಡಗುಂದಿ ಈ 3 ಹೊಸ ತಾಲ್ಲೂಕುಗಳು 50 ಕ್ಕೂ ಹೆಚ್ಚು ಗ್ರಾಮಗಳನ್ನು ಹೊಂದಿರುವುದರಿಂದ ಅಥವಾ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿರುವುದರಿಂದ ಈ ತಾಲ್ಲೂಕುಗಳಿಗೆ(ಪ್ರತಿ ತಾಲ್ಲೂಕಿಗೆ) ಮಂಜೂರಾದ 12 ಹುದ್ದೆಗಳ ಜೊತೆಗೆ ಹೆಚ್ಚುವರಿಯಾಗಿ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ.

| ಕ್ರ.ಸಂ. | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1 | ತಹಶೀಲ್ದಾರ್ ಗ್ರೇಡ್-2 | 01 |
| 2 | ಶಿರಸ್ತೇದಾರ್ | 01 |
| 3 | ಪ್ರ.ದ.ಸ. | 01 |
| 4 | ದ್ವಿ.ದ.ಸ. | 01 |
| 5 | ಗ್ರೂಪ್ 'ಡಿ' | 01 |
| | ಒಟ್ಟು | 05 |
| | ಒಟ್ಟು | 5X3=15 |

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 165 ವೆಚ್ಚ 7/2018 ದಿನಾಂಕ: 03.04.2018ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ.ಪುಟ್ಟನಂಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಾಪನ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್.ಎಸ್.ಎ). ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಇ&ಆರ್ಎಸ್.ಎ). ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು, (ಎ & ಇ). ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
4. ಪ್ರಾದೇಶಿಕ ಆಯುಕ್ತರು, ಕಲಬುರಗಿ/ಬೆಳಗಾವಿ
5. ಜಿಲ್ಲಾಧಿಕಾರಿಗಳು, ವಿಜಯಪುರ/ಕಲಬುರಗಿ

6. ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು/ತಹಶೀಲ್ದಾರ್, ವಿಜಯಪುರ/ಕಲಬುರಗಿ(ಜಿಲ್ಲಾಧಿಕಾರಿಗಳ ಮುಖಾಂತರ)
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
8. ಉಪ ನಿರ್ದೇಶಕರು, ಖಜಾನೆ ಇಲಾಖೆ(ಖಜಾನೆ ಜಾಲ), ಖನಿಜ ಭವನ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಕಂದಾಯ ಇಲಾಖೆ
10. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ-7/8).
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿ
12. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ(ಸಮನ್ವಯ)
13. ಸರ್ಕಾರದ ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ(ಭೂಮಾಪನ, ಸೇ-1 ಮತ್ತು ಸೇ-3) ಇವರ ಆಪ್ತ ಸಹಾಯಕರು
14. ಶಾ.ರ.ಕ/ಹೆಚ್ಚುವರಿ ಪ್ರತಿ.

ಹೊರಹೋಯಿತು
ದಿನಾಂಕ: 19/7/18

LC 9-30,

ಅನುಬಂಧ-4

**TUSHAR GIRI NATH, I.A.S.,**
Principal Secretary to Government
**ತುಷಾರ್ ಗಿರಿ ನಾಥ್, ಭಾ.ಆ.ಸೇ.,**
ಸರ್ಕಾರದ ಪ್ರಧಾನ ಕಾರ್ಯದರ್ಶಿ

GOVERNMENT OF KARNATAKA

Department of Revenue
ಕಂದಾಯ ಇಲಾಖೆ

**ಅ.ಸ.ಪತ್ರ ಸಂಖ್ಯೆ: ಕಂಇ/67/ಎಲ್‌ಆರ್‌ಡಿ/2021** **ದಿನಾಂಕ:15-09-2021**

ಮಾನ್ಯರೇ,

ರಾಜ್ಯದಲ್ಲಿ ಪರಿಣಾಮಕಾರಿಯಾದ, ಸಮರ್ಥವಾದ ಆಡಳಿತ ನೀಡುವ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಉದ್ದೇಶದಿಂದ 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಒಟ್ಟು 50 ಹೊಸ ತಾಲ್ಲೂಕುಗಳನ್ನು ಜನವರಿ 2018 ರಿಂದ ಅನ್ವಯವಾಗುವಂತೆ ರಚನೆ ಮಾಡಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಮತ್ತು ಹೊಸ ತಾಲ್ಲೂಕುಗಳು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತವೆ. ಈ ನೂತನ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯಿಂದ ಹೊಸ ತಾಲ್ಲೂಕು ಕಚೇರಿಯನ್ನು ತೆರೆಯಲು ಮತ್ತು ಇತರೆ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹಂತ ಹಂತವಾಗಿ ತೆರೆಯಲು ಸಹ ಅನುಮತಿ ನೀಡಲಾಗಿರುತ್ತದೆ.

ಮುಂದುವರಿದು, 2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಹೊಸದಾಗಿ 12 ತಾಲ್ಲೂಕುಗಳನ್ನು ರಚಿಸಲು ಸರ್ಕಾರದ ದಿನಾಂಕ:28-02-2019 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ನಂತರದಲ್ಲಿ ಹೊಸದಾಗಿ ಎರಡು ತಾಲ್ಲೂಕುಗಳನ್ನು ರಚಿಸಲು ಸಹ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ 14 ನೂತನ ತಾಲ್ಲೂಕುಗಳ ಪೈಕಿ 07 ತಾಲ್ಲೂಕುಗಳು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದ್ದು, ರಾಜ್ಯದಲ್ಲಿ ಒಟ್ಟು 234 ತಾಲ್ಲೂಕುಗಳಿರುತ್ತವೆ. ಇನ್ನೂ 07 ತಾಲ್ಲೂಕುಗಳಿಗೆ ಗ್ರಾಮಗಳನ್ನು ಸೇರ್ಪಡೆ ಮಾಡಿ ಅಧಿಸೂಚಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಮೇಲ್ಕಂಡಂತೆ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ನೂತನ 57 ತಾಲ್ಲೂಕುಗಳ ಪೈಕಿ ಕಂದಾಯ ಇಲಾಖೆಯಿಂದ 55 ತಾಲ್ಲೂಕುಗಳಲ್ಲಿ ಹೊಸದಾಗಿ ತಾಲ್ಲೂಕು ಕಚೇರಿಗಳನ್ನು ಪ್ರಾರಂಭಿಸಿದ್ದು, ಇನ್ನೆರಡು ತಾಲ್ಲೂಕುಗಳಲ್ಲಿ ತಾಲ್ಲೂಕು ಕಚೇರಿಗೆ ಹುದ್ದೆಗಳನ್ನು ಸೃಜಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಈ ಹಿಂದೆ ರಾಜ್ಯದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ 50 ತಾಲ್ಲೂಕುಗಳಲ್ಲಿ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳು ಕಾರ್ಯಾರಂಭ ಮಾಡಿರುವುದಿಲ್ಲ. ಈ ಕುರಿತು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸಬೇಕಾದ 14 ಪ್ರಮುಖ ಇಲಾಖೆಗಳ ಕಚೇರಿಗಳು ತುರ್ತಾಗಿ ಕಾರ್ಯ ನಿರ್ವಹಿಸುವಂತಾಗಲು ಆರ್ಥಿಕ ಇಲಾಖೆಯ ಸಹಮತಿಗೆ ಕಳುಹಿಸಲು ಸಂಬಂಧಪಟ್ಟ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಂತೆ ದಿನಾಂಕ:14-08-2018 ರ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿತ್ತು. ನಂತರ ಕಾಲಕಾಲಕ್ಕೆ ಈ ಕುರಿತು ಅಗತ್ಯ ಸೂಚನೆಗಳನ್ನು ಸಹ ನೀಡಲಾಗಿದೆ. ಹೊಸ ತಾಲ್ಲೂಕುಗಳ ವಿವರ ಹಾಗೂ ಪತ್ರದ ಪ್ರತಿಗಳನ್ನು ಇದರೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

5th Floor, 3rd Gate, M.S. Building,
Dr. B.R. Ambedkar Veedhi, Bengaluru-560 001
Tel: +91-80-22252731, 22032495
Fax: +91-80-22256384

5ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001
E-mail:prs.revenue@gmail.com



Generated from eOffice by R GURUPRAKASH, RD-SO-SSLR(RG), SECTION OFFICER, REVENUE DEPATMENT SEC on 12/09/2022 04:47 PM

**TUSHAR GIRI NATH, I.A.S.,**
Principal Secretary to Government
**ತುಷಾರ್ ಗಿರಿ ನಾಥ್, ಭಾ.ಆ.ಸೇ.,**
ಸರ್ಕಾರದ ಪ್ರಧಾನ ಕಾರ್ಯದರ್ಶಿ

Department of Revenue
ಕಂದಾಯ ಇಲಾಖೆ



ನಂತರ, ದಿನಾಂಕ:04-07-2019 ರಂದು ಅಂದಿನ ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹೊಸ ತಾಲ್ಲೂಕುಗಳಲ್ಲಿ ಪ್ರಮುಖ ಇಲಾಖೆಗಳ ಕಚೇರಿಗಳನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿತ್ತು. ಸದರಿ ಸಭೆಯಲ್ಲಿನ ತೀರ್ಮಾನದಂತೆ ಹೊಸ ತಾಲ್ಲೂಕುಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲು ಅನುವಾಗುವಂತೆ ತಮ್ಮ ಇಲಾಖಾ ವ್ಯಾಪ್ತಿಗೆ ಸಂಬಂಧಿಸಿದ ಅಗತ್ಯವಿರುವ ತಾಲ್ಲೂಕು ಮಟ್ಟದ ಕಚೇರಿಗಳನ್ನು ಕೂಡಲೇ ತೆರೆಯಲು ಆರ್ಥಿಕ ಇಲಾಖೆಯ ಸಹಮತಿ ಪಡೆದು ಅಗತ್ಯ ಕ್ರಮ ಕೈಗೊಳ್ಳುವಂತೆ ದಿನಾಂಕ:18-07-2019 ರಂದು ಕಂದಾಯ ಇಲಾಖೆಯ ಅಂದಿನ ಅಪರ ಮುಖ್ಯ ಕಾರ್ಯದರ್ಶಿಯವರಿಂದ ಅರೆ ಸರ್ಕಾರಿ ಪತ್ರ ಮುಖೇನ ತಮ್ಮನ್ನು ಕೋರಲಾಗಿತ್ತು. ಸಭಾ ನಡವಳಿ ಪ್ರತಿ ಹಾಗೂ ಪತ್ರದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ. ಆದರೆ ಹೊಸ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಕಚೇರಿಗಳು ಕಾರ್ಯಾರಂಭ ಮಾಡಿರುವುದಿಲ್ಲವೆಂದು ಜನಪ್ರತಿನಿಧಿಗಳಿಂದ ಹಾಗೂ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾಗುತ್ತಿವೆ. ಇದಲ್ಲದೆ, ವಿಧಾನ ಮಂಡಲದ ಅಧಿವೇಶನಗಳಲ್ಲಿ ಈ ವಿಷಯದ ಕುರಿತು ಮಾನ್ಯ ಸದಸ್ಯರುಗಳು ಪ್ರಶ್ನಿಸುತ್ತಿದ್ದು, ಹೊಸ ತಾಲ್ಲೂಕುಗಳಲ್ಲಿ ಕಚೇರಿಗಳು ಪ್ರಾರಂಭವಾಗದ ಬಗ್ಗೆ ಹಾಗೂ ಮೂಲಸೌಲಭ್ಯಗಳನ್ನು ಕಲ್ಪಿಸದಿರುವ ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಆದ್ದರಿಂದ, 2017-18ನೇ ಸಾಲಿನ ಇದುವರೆಗೆ ರಾಜ್ಯದಲ್ಲಿ ಹೊಸದಾಗಿ ಸೃಜನೆಯಾಗಿರುವ 57 ತಾಲ್ಲೂಕುಗಳಲ್ಲಿ ತಮ್ಮ ಇಲಾಖೆಗೆ ಸಂಬಂಧಿಸಿದ ತಾಲ್ಲೂಕು ಮಟ್ಟದ ಕಚೇರಿಯನ್ನು ಇನ್ನೂ ಪ್ರಾರಂಭಿಸದೇ ಇದ್ದಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆದು, ಅಗತ್ಯ ಪ್ರಮಾಣದ ಹುದ್ದೆಗಳೊಂದಿಗೆ ಹೊಸ ಕಚೇರಿಗಳನ್ನು ಪ್ರಾರಂಭಿಸಲು ಆದ್ಯತೆ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ

ಸಹಿ/-

ಸಚಿವಾಲಯದ ಎಲ್ಲಾ ಇಲಾಖೆಗಳ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /
ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

<u>ಪ್ರತಿ:</u>
ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಹಾವೇರಿ, ಕೋಲಾರ, ಚಿಕ್ಕಮಗಳೂರು, ಮೈಸೂರು, ಬೆಂಗಳೂರು ನಗರ, ದಕ್ಷಿಣ ಕನ್ನಡ, ಉಡುಪಿ, ರಾಯಚೂರು, ಕೊಪ್ಪಳ, ಕಲಬುರಗಿ, ಗದಗ, ಧಾರವಾಡ, ಬಳ್ಳಾರಿ, ಬೀದರ್, ಚಾಮರಾಜನಗರ, ಬೆಳಗಾವಿ, ಬಾಗಲಕೋಟೆ, ದಾವಣಗೆರೆ, ವಿಜಯಪುರ, ಯಾದಗಿರಿ,
ಕೊಡಗು ಜಿಲ್ಲೆ – ಅಗತ್ಯ ಕ್ರಮಕ್ಕಾಗಿ

**(ತುಷಾರ್ ಗಿರಿ ನಾಥ್)**

5th Floor, 3rd Gate, M.S. Building,
Dr. B.R. Ambedkar Veedhi, Bengaluru-560 001
Tel: +91-80-22252731, 22032495
Fax: +91-80-22256384

5ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001
E-mail:prs.revenue@gmail.com



Generated from eOffice by R GURUPRAKASH, RD-SO-SSLR(RG), SECTION OFFICER, REVENUE DEPATMENT SEC on 12/09/2022 04:47 PM

## 2017-18ನೇ ಸಾಲಿನಿಂದ ಇದುವರೆಗೆ ಅಸ್ತಿತ್ವಕ್ಕೆ ಬಂದಿರುವ ತಾಲ್ಲೂಕುಗಳ ವಿವರ

| ವಿಭಾಗ | ಜಿಲ್ಲೆ | ಹೊಸ ತಾಲ್ಲೂಕಿನ ಹೆಸರು |
|---|---|---|
| ಬೆಂಗಳೂರು | 1. ಬೆಂಗಳೂರು ನಗರ | 1. ಯಲಹಂಕ |
| | 2. ಕೋಲಾರ | 2. ಕೆ.ಜಿ.ಎಫ್. |
| | 3. ದಾವಣಗೆರೆ | 3. ನ್ಯಾಮತಿ |
| ಮೈಸೂರು | 4. ದಕ್ಷಿಣ ಕನ್ನಡ | 4. ಮೂಡುಬಿದರೆ |
| | | 5. ಕಡಬ |
| | | 6. **ಉಳ್ಳಾಲ*** |
| | | 7. **ಮುಲ್ಕಿ*** |
| | 5. ಮೈಸೂರು | 8. ಸರಗೂರು |
| | | 9. **ಸಾಲಿಗ್ರಾಮ*** |
| | 6. ಚಿಕ್ಕಮಗಳೂರು | 10. ಅಜ್ಜಂಪುರ |
| | | 11. **ಕಳಸಾ*** |
| | 7. ಚಾಮರಾಜನಗರ | 12. ಹನೂರು |
| | 8. ಉಡುಪಿ | 13. ಬ್ರಹ್ಮಾವರ |
| | | 14. ಕಾಪು |
| | | 15. ಬೈಂದೂರು |
| | | 16. ಹೆಬ್ರಿ |
| | 9. ಕೊಡಗು | 17. **ಪೊನ್ನಂಪೇಟೆ*** |
| | | 18. **ಕುಶಾಲನಗರ*** |
| ಬೆಳಗಾವಿ | 10. ಬೆಳಗಾವಿ | 19. ನಿಪ್ಪಾಣಿ |
| | | 20. ಮೂಡಲಗಿ |
| | | 21. ಕಾಗವಾಡ |
| | 11. ಬಾಗಲಕೋಟೆ | 22. ಗುಳೇದಗುಡ್ಡ |
| | | 23. ರಬಕವಿ – ಬನಹಟ್ಟಿ |
| | | 24. ಇಳಕಲ್ |
| | 12. ಧಾರವಾಡ | 25. ಅಣ್ಣಿಗೇರಿ |
| | | 26. ಅಳ್ನಾವರ |
| | | 27. ಹುಬ್ಬಳ್ಳಿ ನಗರ |
| | 13. ಗದಗ | 28. ಗಜೇಂದ್ರಗಡ |
| | | 29. ಲಕ್ಷ್ಮೇಶ್ವರ |
| | 14. ಹಾವೇರಿ | 30. ರಟ್ಟಿಹಳ್ಳಿ |
| | 15. ಉತ್ತರ ಕನ್ನಡ | 31. ದಾಂಡೇಲಿ |
| | 16. ವಿಜಯಪುರ | 32. ಬಬಲೇಶ್ವರ |
| | | 33. ನಿಡಗುಂದಿ |
| | | 34. ತಿಕೋಟ |
| | | 35. ದೇವರಹಿಪ್ಪರಗಿ |
| | | 36. ತಾಳಿಕೋಟೆ |
| | | 37. ಚಡಚಣ |
| | | 38. ಕೊಲ್ಹಾರ |
| | | 39. **ಆಲಮೇಲ*** |



Generated from eOffice by R GURUPRAKASH, RD-SO-SSLR(RG), SECTION OFFICER, REVENUE DEPATMENT SEC on 12/09/2022 04:47 PM

| | | | | |
|---|---|---|---|---|
| ಕಲಬುರಗಿ | 17. | ಬೀದರ | 40. | ಚಿಟಗುಪ್ಪ |
| | | | 41. | ಹುಲಸೂರು |
| | | | 42. | ಕಮಲಾನಗರ |
| | 18. | ಬಳ್ಳಾರಿ | 43. | ಕುರುಗೋಡು |
| | | | 44. | ಕೊಟ್ಟೂರು |
| | | | 45. | ಕಂಪ್ಲಿ |
| | 19. | ಕಲಬುರಗಿ | 46. | ಕಾಳಗಿ |
| | | | 47. | ಕಮಲಾಪೂರ |
| | | | 48. | ಯಡ್ರಾಮಿ |
| | | | 49. | ಶಹಾಬಾದ್ |
| | 20. | ಯಾದಗಿರಿ | 50. | ಹುಣಸಗಿ |
| | | | 51. | ವಡಗೇರ |
| | | | 52. | ಗುರುಮಿಟ್ಕಲ್ |
| | 21. | ಕೊಪ್ಪಳ | 53. | ಕುಕನೂರು |
| | | | 54. | ಕನಕಗಿರಿ |
| | | | 55. | ಕಾರಟಗಿ |
| | 22. | ರಾಯಚೂರು | 56. | ಮಸ್ಕಿ |
| | | | 57. | ಸಿರವಾರ |

* 2019-20ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುವ ತಾಲ್ಲೂಕುಗಳು

**ಆಡಳಿತಾತ್ಮಕ ಅನುಮೋದನೆಯಾಗಿದ್ದು, ಅಧಿಸೂಚಿಸುವ ಪ್ರಕ್ರಿಯೆ ಚಾಲನೆಯಲ್ಲಿರುವ ತಾಲ್ಲೂಕುಗಳು**

| ವಿಭಾಗ | ಜಿಲ್ಲೆ | | ಹೊಸ ತಾಲ್ಲೂಕಿನ ಹೆಸರು | |
|---|---|---|---|---|
| ಬೆಂಗಳೂರು | 1. | ರಾಮನಗರ | 1. | ಹಾರೋಹಳ್ಳಿ |
| | 2. | ಚಿಕ್ಕಬಳ್ಳಾಪುರ | 2. | ಚೇಳೂರು |
| | | | 3. | ಮಂಚೇನಹಳ್ಳಿ |
| ಮೈಸೂರು | 3. | ಹಾಸನ | 4. | ಶಾಂತಿಗ್ರಾಮ |
| ಬೆಳಗಾವಿ | 4. | ಬೆಳಗಾವಿ | 5. | ಯರಗಟ್ಟಿ |
| | 5. | ಬಾಗಲಕೋಟೆ | 6. | ತೇರದಾಳ |
| ಕಲಬುರಗಿ | 6. | ರಾಯಚೂರು | 7. | ಅರಕೇರಾ |



Generated from eOffice by R GURUPRAKASH, RD-SO-SSLR(RG), SECTION OFFICER, REVENUE DEPATMENT SEC on 12/09/2022 04:47 PM